ಕೊಟ್ಟಿದೆ. ನಿಮಗೂ ಹೆಚ್ಚು ಅಗತ್ಯವಿರುವ ಕಡೆ ನಾನು ಮಾಡಿಕೊಡುತ್ತೇನೆ. ಈಗ ನಾನು ನಿಮಗೆ ಕೊಟ್ಟಿರುವ ಅಂಕಿ ಅಂಶ ಪರಿಪೂರ್ಣವಾಗಿದೆ. ನೀವೇನು 33/11 ಕೆ.ವಿ. ಸ್ಥಾವರಗಳ ಬಗ್ಗೆ ಪ್ರಶ್ನೆಯನ್ನು ಕೇಳಿದ್ದೀರಿ, ನಾನು ಆದ್ಯತೆ ಮೇಲೆ ಆದಷ್ಟು ಬೇಗನೆ ಕೆಲಸ ಮುಗಿಸಿ ಕೊಡುತ್ತೇನೆ. ಇನ್ನೇನಾದರೂ ಸಮಸ್ಯೆಗಳಿದ್ದರೆ ನನಗೆ ವೈಯಕ್ತಿಕವಾಗಿ ಭೇಟಿ ಮಾಡಿ, ಸಮಸ್ಯೆ ಇದ್ದರೆ ನಾನು ಬಗೆಹರಿಸಿಕೊಡುತ್ತೇನೆ, ನಿಮ್ಮ ಬಗ್ಗೆ ನನಗೆ ಕಾಳಜಿ ಇದೆ. ಆ ಕ್ಷೇತ್ರದ ಅಭಿವೃದ್ಧಿ ಆಗಬೇಕೆಂದು ನನ್ನ ಕಳಕಳಿ ಇದೆ.

**ತುಮಕೂರು ಜಿಲ್ಲೆಯಲ್ಲಿ ವಿದ್ಯುತ್ ಸಬ್–ಸ್ಟೇಷನ್ ಪ್ರಾರಂಭದ ಬಗ್ಗೆ**

**96 (606) ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ):** ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತುಮಕೂರು ಜಿಲ್ಲೆಯ ತುರುವೇಕೆರೆ ಕ್ಷೇತ್ರದ ತಂಡಗ, ಸೀಗೆಹಳ್ಳಿ, ತಾಳಕೆರೆ ಗ್ರಾಮಗಳಲ್ಲಿ ವಿದ್ಯುತ್ ಸಬ್–ಸ್ಟೇಷನ್ ಪ್ರಾರಂಭ ಮಾಡಲು ಉದ್ದೇಶಿಸಲಾಗಿದೆಯೇ;

ಆ) ಹಾಗಿದ್ದಲ್ಲಿ, ಇದಕ್ಕಾಗಿ ಈ ವರ್ಷದ ಆಯವ್ಯಯದಲ್ಲಿ ಮಂಜೂರು ಮಾಡಲಾದ ಹಣವೆಷ್ಟು ಹಾಗೂ ಕಾಮಗಾರಿಯನ್ನು ಯಾವಾಗಿನಿಂದ ಪ್ರಾರಂಭ ಮಾಡಲಾಗುವುದು?

**ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಮುಖ್ಯಮಂತ್ರಿ) :–**

ಅ) ತುರುವೇಕೆರೆ ಕ್ಷೇತ್ರದ ತಂಡಗ ಮತ್ತು ತಾಳೆಕೆರೆ ಗ್ರಾಮಗಳಲ್ಲಿ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಸದರಿ ಕ್ಷೇತ್ರದ ಸೀಗೆಹಳ್ಳಿ ಗ್ರಾಮದಲ್ಲಿ ವಿದ್ಯುತ್ ಉಪ ಕೇಂದ್ರದ ಸ್ಥಾಪನೆಯ ಉದ್ದೇಶ ಸದ್ಯಕ್ಕೆ ಇರುವುದಿಲ್ಲ.

ಆ) ತಂಡಗ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ: ತಂಡಗ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರದ ಕಾಮಗಾರಿಗಳಿಗಾಗಿ ಪ್ರಸಕ್ತ ವರ್ಷವಾದ 2010–11 ನೇ ಸಾಲಿನ ಆಯವ್ಯಯದಲ್ಲಿ ರೂ. 60 ಲಕ್ಷಗಳನ್ನು ಮಂಜೂರು ಮಾಡಲಾಗಿರುತ್ತದೆ. ಟೆಂಡರ್ ಪ್ರಕ್ರಿಯೆ ಮುಗಿದ ನಂತರ ಸದರಿ ವಿದ್ಯುತ್ ಉಪ ಕೇಂದ್ರದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ತಾಳೆಕೆರೆ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ: ತಾಳೆಕೆರೆ ಗ್ರಾಮದ ಉದ್ದೇಶಿತ ವಿದ್ಯುತ್ ಉಪ ಕೇಂದ್ರ ಸ್ಥಾಪನೆ ಪರಿಶೀಲನೆಯಲ್ಲಿರುತ್ತದೆ.

**ಶ್ರೀ ಎಂ.ಟಿ. ಕೃಷ್ಣಪ್ಪ :** ಮಾನ್ಯ ಅಧ್ಯಕ್ಷರೆ, ಉತ್ತರವನ್ನು ನೀಡಲಾಗಿದೆ. ಬಹುಶಃ

ಇದು ಕಳೆದ ಸಮ್ಮಿಶ್ರ ಸರ್ಕಾರ ಇದ್ದಾಗಿನಿಂದಲೂ ಈ ಮೂರು ಸ್ಟೇಷನ್‌ಗಳ ಬಗ್ಗೆ ನಾನು ಕೇಳುತ್ತಲೇ ಇದ್ದೇನೆ. ತುರುವೇಕೆರೆ ತಾಲ್ಲೂಕು ನಂಜುಂಡಪ್ಪ ವರದಿಯಲ್ಲಿ ಅತ್ಯಂತ ಹಿಂದುಳಿದ ಕ್ಷೇತ್ರವಾಗಿದೆ. ಅದರಲ್ಲಿ ತಂಡಗ ಎಂಬ ಕ್ಷೇತ್ರ ಕಳೆದ ಬಾರಿಯೇ ಟೆಂಡರ್ ಕೊಡುತ್ತೇವೆಂದು ಹೇಳಿ ಅಧಿಕಾರಿಗಳು ಪೂಜೆ ಮಾಡಿಸಿದ್ದರು ಆದರೂ ಕೆಲಸ ಪ್ರಾರಂಭವಾಗಿಲ್ಲ. ತಾಳಕೆರೆ ಗ್ರಾಮ ಕೂಡ ಈ ಸದನದಲ್ಲಿ ಕಾನೂನು ಸಚಿವರಾಗಿ ಕೆಲಸ ಮಾಡಿದಂತಹ ಮಾನ್ಯ ಸುಬ್ರಹ್ಮಣ್ಯಂರವರ ಗ್ರಾಮ ಅದು. ಆ ಊರಿಗೆ ಆಸ್ಪತ್ರೆಯನ್ನು ಕೊಡಲಾಗಿದೆ. ಒಂದು 110 ಕೆ.ವಿ. ಸ್ಟೇಷನ್ ಕೊಡಿ ಎಂದು ನಾನು ಬಹಳ ಸಾರಿ ಕೇಳಿದ್ದೇನೆ. ಸರ್ವೇ ಮಾಡಿದ್ದಾರೆ, ಲ್ಯಾಂಡ್ ಅಕ್ವಿಸಿಷನ್ ಆಗಿದೆ, ಆದರೂ ಸಹ ಅದು ಮಂಜೂರಾಗಿಲ್ಲ. ಕಳೆದ ಬಾರಿ ಮಾನ್ಯ ಈಶ್ವರಪ್ಪನವರು ಇದೇ ಉತ್ತರವನ್ನು ಕೊಟ್ಟಿದ್ದರು. ಒಂದು ವಾಕ್ಯವೂ ಬದಲಾವಣೆ ಆಗಿಲ್ಲ. ಹಾಗಾಗಿ ಮಾನ್ಯ ಮುಖ್ಯ ಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ನಂಜುಂಡಪ್ಪ ವರದಿಯಲ್ಲಿ ನಮ್ಮ ಕ್ಷೇತ್ರ ಅತ್ಯಂತ ಹಿಂದುಳಿದ ಕ್ಷೇತ್ರ ಎಂದು ಹೇಳಿರುವುದರಿಂದ ದಯಮಾಡಿ ಸ್ವಲ್ಪ ಆದ್ಯತೆ ಮೇಲೆ ಮಾಡಿಕೊಡಬೇಕು. ನಮ್ಮ ತುರುವೇಕೆರೆ ಕ್ಷೇತ್ರದ ಸೀಗೇಹಳ್ಳಿ ಎರಡು ಬಾರಿ ಸ್ಯಾಂಕ್ಷನ್ ಮಾಡಿ, ಎರಡು ಬಾರಿ land acquisition ಆಗಿ ಎರಡು ಬಾರಿ ಸರ್ವೇ ಮಾಡಿಕೊಂಡು ಹೋಗಿದ್ದಾರೆ. ಆದರೂ ಸ್ಯಾಂಕ್ಷನ್ ಆಗಿಲ್ಲ. ಪಕ್ಕದಲ್ಲಿ ಯಡಿಯೂರು ಇದೆ ಎಂದು ಹೇಳುತ್ತಾರೆ. ನಮಗೂ ಅದಕ್ಕೂ ತುಂಬ distrance ಇದೆ. ಆ ಏರಿಯಾಗಳೆಲ್ಲಾ ಅತ್ಯಂತ ಹಿಂದುಳಿದ ಪ್ರದೇಶಗಳು. ಮಾನ್ಯ ಮುಖ್ಯಮಂತ್ರಿಗಳು ಆ ಖಾತೆ ಹೊಂದಿರುವುದರಿಂದ ಆದ್ಯತೆ ಮೇಲೆ ಮಾಡಬೇಕು. ಮೂರು ಸ್ಟೇಷನ್‌ಗಳನ್ನು ಕೇಳಿದ್ದೇವೆ. ನಾವೇನು ಹೆಚ್ಚಿಗೆ ಕೇಳಲಿಲ್ಲ. ಅದನ್ನು ಮಂಜೂರು ಮಾಡಿಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿಸಿಕೊಳ್ಳುತ್ತೇನೆ.

**ಶ್ರೀ ಬಿ.ಎಸ್. ಯಡಿಯೂರಪ್ಪ** : ಮಾನ್ಯ ಅಧ್ಯಕ್ಷರೆ, ಬೆಂಗಳೂರಿಗೆ ಇಷ್ಟು ಹತ್ತಿರವಿರುವಂತಹ ತುರುವೇಕೆರೆ ನಂಜುಂಡಪ್ಪ ವರದಿ ಆಧಾರದ ಮೇಲೆ ಹಿಂದುಳಿದಿದೆ ಎನ್ನುವಂಥದ್ದೇ ನಮಗೆಲ್ಲರಿಗೂ ನೋವು ತರುವಂಥದ್ದು, ನಮ್ಮ ತುರುವೇಕೆರೆ ಕ್ಷೇತ್ರ ಆದಷ್ಟು ಬೇಗ ಮುಂದುವರೆದ ತಾಲ್ಲೂಕುಗಳಲ್ಲಿ ಒಂದಾಗಬೇಕೆಂದು ನನ್ನ ಅಪೇಕ್ಷೆ. ಮಾನ್ಯ ಕೃಷ್ಣಪ್ಪನವರ ಕಾಲದಲ್ಲಾದರೂ ಸಹ ಈ ಹಿಂದುಳಿದ ತಾಲ್ಲೂಕು ಎನ್ನುವಂತಹ ಪಟ್ಟ ಹೋಗಿ ಅದು ಮುಂದುವರೆದ ತಾಲ್ಲೂಕುಗಳ ಸಾಲಿನಲ್ಲಿ ಸೇರಬೇಕೆಂದು ನನ್ನ ಕಳಕಳಿ ಇದೆ. ಆ ಹಿನ್ನೆಲೆಯಲ್ಲಿ ನಿಮ್ಮ ತುರುವೇಕೆರೆ ಕ್ಷೇತ್ರದ ತಂಡಗ ಗ್ರಾಮದಲ್ಲಿ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವುದಕ್ಕೆ, ಕಾಮಗಾರಿಯನ್ನು ಕೈಗೊಳ್ಳುವುದಕ್ಕೆ 2010–11ನೇ ಸಾಲಿನಲ್ಲಿ 60 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದ್ದೇನೆ. ಆದಷ್ಟು ಬೇಗ ಪೂರ್ಣ ಮಾಡಿಕೊಡುತ್ತೇನೆ. ಇದು ಒಂದು. ತುಮಕೂರು ಜಿಲ್ಲೆ ತುರುವೇಕೆರೆ ಕ್ಷೇತ್ರ ತಾಳಗೇರೆ ಗ್ರಾಮದಲ್ಲಿ 110/11 ಕೆ.ವಿ. ವಿದ್ಯುತ್ ಉಪ ಕೇಂದ್ರ ಸ್ಥಾಪಿಸುವ ಬಗ್ಗೆ ನಾನು ಪರಿಶೀಲನೆ ಮಾಡುತ್ತಿದ್ದೇನೆ. ನಾನು ನಿಮ್ಮ ಜೊತೆ ಮಾತವಾಡಿ ಅದರ ಬಗ್ಗೆ ಗಮನ ಕೊಡುತ್ತೇನೆ. ಸಧ್ಯಕ್ಕೆ ಸೀಗೆಹಳ್ಳಿ ನನ್ನ ಕಣ್ಣ ಮುಂದೆ ಇಲ್ಲ. ಆದರೆ ತಾಳಕೆರೆಯನ್ನು

ಏನಾದರೂ ಮಾಡಿ ಈ ವರ್ಷ ಸೇರಿಸುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ, ಮೊದಲನೆಯದು ಪೂರ್ಣ ಮಾಡಿಸಿ ಕೊಡುತ್ತೇನೆ.

**ಶ್ರೀ ಎಂ.ಟಿ. ಕೃಷ್ಣಪ್ಪ :** ಸೀಗೆಹಳ್ಳಿ ಸಬ್ ಸ್ಟೇಷನ್ ಮಾಡಿ ಕೊಡಿ. ಬಹಳ ಅತ್ಯಂತ ಹಿಂದುಳಿದಂತಹ ಕೇಂದ್ರ ಅದು, ಯಾವಾಗಲೂ ಬರಗಾಲ ಇರುತ್ತದೆ. ದಯಮಾಡಿ ಅದನ್ನೂ ಸೇರಿಸಿ ಮಾಡಿಕೊಡಬೇಕು.

**ಶ್ರೀ ಬಿ.ಎಸ್. ಯಡಿಯೂರಪ್ಪ :** ಆಯಿತು ಮಾಡಿ ಕೊಡುತ್ತೇನೆ.

## ಮುಖ್ಯ ಮಂತ್ರಿಗಳ ಕೋಟಾದ ಅಡಿಯಲ್ಲಿ ನಿವೇಶನ ಹಂಚಲು ಇರುವ ನಿಯಮಗಳ ಬಗ್ಗೆ

**97 (846) ಶ್ರೀ ಅಪ್ಪಚ್ಚು ರಂಜನ್, ಎಂ.ಪಿ. (ಮಡಿಕೇರಿ) :–** ಮಾನ್ಯ ಮುಖ್ಯಮಂತ್ರಿಗಳು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಮುಖ್ಯ ಮಂತ್ರಿಗಳ ಕೋಟಾದ ಅಡಿಯಲ್ಲಿ ('G' category) ನಿವೇಶನ ಹಂಚಲು ಇರುವ ನಿಯಮಗಳಾವುವು ?

ಆ) ಕಳೆದ 3 ವರ್ಷದಿಂದ ಈವರೆವಿಗೆ ಈ ಕೋಟಾದ ಅಡಿಯಲ್ಲಿ ಶಾಸಕರುಗಳಿಗೆ ವಿತರಿಸಲಾದ ನಿವೇಶನಗಳು ಎಷ್ಟು (ಹೆಸರು, ನೀಡಿದ ವರ್ಷದ ವಿವರ ನೀಡುವುದು):

ಇ) ಕಳೆದ 3 ವರ್ಷಗಳಿಂದ ಈವರೆವಿಗೆ ಈ ಕೋಟಾದಡಿಯಲ್ಲಿ ಅರ್ಜಿ ಸಲ್ಲಿಸಿದ ಶಾಸಕರ ಸಂಖ್ಯೆ ಎಷ್ಟು (ವಿವರ ನೀಡುವುದು) ?

ಈ) ಇನ್ನೂ ಎಷ್ಟು ಜನ ಶಾಸಕರುಗಳಿಗೆ ನಿವೇಶನ ವಿತರಿಸಬೇಕಾಗಿದೆ ? (ವಿವರ ನೀಡುವುದು)

**ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯ ಮಂತ್ರಿಗಳು) :–**

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ನಿವೇಶನಗಳ ಹಂಚಿಕೆ) ನಿಯಮ 1984ರ ನಿಯಮ 5 ಹಾಗೂ ಸುತ್ತೋಲೆ ಸಂಖ್ಯೆ : ನಅಇ 129, ಬೆಂಆಸೇ 97, ದಿನಾಂಕ : 6–8–97ರಲ್ಲಿ ಹೊರಡಿಸಿರುವ ಪರಿಷ್ಕೃತ ಮಾರ್ಗಸೂಚಿಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 'ಜಿ' ಪ್ರವರ್ಗದಡಿ ಬಿಡಿ ನಿವೇಶನ ಹಂಚಿಕೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಆ) ಕಳೆದ 3 ವರ್ಷಗಳಿಂದ 126 ವಿಧಾನಸಭಾ, ವಿಧಾನ ಪರಿಷತ್ ಹಾಗೂ ಲೋಕಸಭಾ ಸದಸ್ಯರುಗಳಿಗೆ 'ಜಿ' ಪ್ರವರ್ಗದಲ್ಲಿ ಬಿಡಿ ನಿವೇಶನವನ್ನು ಹಂಚಿಕೆ ಮಾಡಲಾಗಿರುತ್ತದೆ. (ವಿವರವನ್ನು ಅನುಬಂಧ–1 ರಲ್ಲಿ ನೀಡಲಾಗಿದೆ).

ಇ) 126+40=166 (ವಿವರವನ್ನು ಅನುಬಂಧ 1 ಮತ್ತು 2 ರಲ್ಲಿ ನೀಡಲಾಗಿದೆ).

ಈ) 40 (ವಿವರಗಳನ್ನು ಅನುಬಂಧ 2 ರಲ್ಲಿ ನೀಡಲಾಗಿದೆ)

ಅನುಬಂಧ–1